ಮಲ್ಲವ್ವನ ಮನ್ಯಾಗ ಟಿವಿ ನೋಡೊದು. ಎದಿ ಸೀಳಿದ್ರ ಯಾಡ್ ಅಕ್ಷರಿಲ್ಲ, ನಿಮ್ಮಪ್ಪ ಊರ್ ಕುಡ್ಕ. ನಾನರೇ ಏನ್ ಮಾಡ್ಲಿ ಇರೊಷ್ಟ ದಿನ ಮಾಡ್ತೀನಿ, ನಾ ಸತ್ತಮ್ಯಾಲ ತಿಳಿತಾದ ನಿಮ್ ತಂದಿ ಮಕ್ಕಿಗಿ' ಅಂತ ಅನ್ಕೊತ ಹಿಂದ್ಕ ತಿರ್ಗಿ ಮಗ್ನ ನೋಡಿದ್ಲು. ಮಗ ಪರಸಪ್ಪ ಜಗದ ಮಲ್ಲವ್ವನ ಮನಿ ಕಡೆ ತರ್ಗಿತರ್ಗಿ ನೋಡ್ಕೊತಾ ಬರ್ತಿದ್ದ. ಅದ್ಕ ಸಿಟ್ಟಿಗೆದ್ದ ಸಾಮವ್ವ 'ಏ... ಲೋ... ನನ್ ಹಾಟ್ಯಾನ ಮಗ್ನೆ ಅಲ್ಲೇನ್ ನೋಡ್ತಿಲೋ... ಮುಂದ್ನೊಡಿ ನೆಲ ನೋಡ್ಕೊಂಡು ಬಾ...' ಅಂತ ಬೈದ್ಲು. ಅವ್ರವ್ವ ಬೈದುದ್ದು ಕೇಳಿ, ಓಡೋಡಿ ಬಂದ ಪಾರ. 'ಯವ್ವಬೆ... ಈ ಸಲ ಸ್ವಾಮನಾಥ್ನ ಜ್ಯಾತ್ರಿಗಿ ನಂಗ್ ನಾಲಿನ ಕಾಲ್ಮರಿ ಕೊಡ್ಸಬೇಕು ನೋಡು, ಅವು ಎಷ್ಟ್ ಚಂದ್ ಇರ್ತಾವ' ಅಂತ ಗೊಣಗಿದ. 'ಅಂತsss ಕಾಲ್ಮರಿ ನೀನೆಲ್ಲಿ ನೋಡ್ದೆಲೋ...'ಎಂದಳು ಸಾಮವ್ವ. ತೆಲಿ ಕೆಳ್ಗಾಕಿ ಮೆಲ್ಲಕ ಪರಸಪ್ಪ 'ಆಚಿ ಓಣಿ ಮಲ್ಲವ್ವಮ್ಮ ಇಲ್ಲ... ಆಕಿ ಮನಿ ಮುಂದ ಸಂಜ್ಯಾದ್ರ ಆ ಕಾಲ್ಮರಿರ್ತವ. ಆದ್ರ ಮುಂಜ್ಯಾಳೆ ಮುಲ್ಲಾ ಕೂಗೊಷ್ಟಿಗೆ ಅವು ಇರಲ್ಬೇ... ನಿನ್ನ ಕೂಡ ಹೆಂಡಿಕಸ್ಕ ಬಂದಾಗೊಮ್ಮಿ ನೋಡ್ತೀನಿ. ಹಗ್ಲ ಹೊತ್ತಿನ್ಯಾಗ ಬ್ಯಾರ್ ಬ್ಯಾರೆವೇ ಇರ್ತಾವ, ಇವತ್ತು ಹೊಸ ಕಾಲ್ಮರಿ ಇದ್ವು, ಅದ್ಕೆ ಗಪ್ನ ತಂಗೊಂಡು ಬಂದ್ರಾಯ್ತಂತ ಮಾಡಿದ್ಯಾsss'. ಆ ಮಾತಿಗಿ ಸಾಮವ್ವ, 'ಇನ್ನೊಂದ ಸಲ ಆ ಮನಿಕಡ್ಗಿ ಹೋದೆಂದ್ರ ರ್‍ಯಾಕೊಳ್ಳಿ ತೋಂಡೆಬಡ್ಡ ಬಿಡ್ತಿನಿ ನಿನ್ನ' ಅನ್ನೊಷ್ಟ್ರರಲ್ಲಿ ಗೌಡ್ರ ಮನಿ ಹತ್ರಕ್ ಬಂದಾಗಿತ್ತು ತಾಯಿ ಮಗ. ಅಲ್ಲಿದ್ದ ಬೀದಿ ನಾಯಿಗಳು 'ಬೌವ್sss... ಅಂತ ಬೊಗ್ಳಕಾ ಚಾಲೂ ಮಾಡಿದ್ವು. ಅವ್ರವ್ವ ಬೈದ ಸಿಟ್ಟನ್ಯಾಗಿದ್ದ ಪರಸಪ್ಪ, ರೋಡ್ ಮಾಡ್ಲಕಂತ ಹಾಕಿದ ಕಡಿ ತೊಗೊಂಡು ಅವ್ಕ ಹೊಡ್ದ, ಏಟ್ ತಿಂದ ಅದ್ರಗೊಂದು ನಾಯಿ ಕೈಂ..! ಕೈಂ...! ಅಂತ ಓಡೋಯ್ತು, ಆ ನಾಯಿ ಶಬ್ದಕ್ ಎದ್ದ ಗೌಡ್ರ ಆಳ್ಮಗ., 'ಹೇಯ್ ಯಾರಲೇ...?' ಮಗ್ನನ ಜೊತ್ಗಿ ಬರ್ಗಿ ಬಗ್ಲಾಗ ಬಡ್ಕೊಂಡು ನಿಂತ ಸಾಮವ್ವ 'ನಾನೇರಿ ಯಪ್ಪ ಹೊಲೇರ್ ತಿಪ್ಪಣ್ಣನ ಹೆಂಡ್ತಿ'. 'ಹ್ಞೂ..! ಈಗ ಬರೊದೇನ್. ಆಯ್ತು ಸ್ವಚ್ಛ ಕಸ ಬಳ್ದು ಹಂಗೆ ಸ್ವಲ್ಪ ಸಂಡಾಸ್ ರೂಮಿಗಿ ಬರ್ಗಿ ಆಡ್ಸಿ ಹೋಗ್ರಿ. ಇಲ್ಲಂದ್ರ ಗೌಡ್ಸಾನಿ ಬೈತಾಳ ನೋಡು' ಅಂತ್ಹೇಳಿದ ಆಳ್ಮಗ. 'ಆಯ್ತು ಧಣಿ' ಅಂದ ಸಾಮವ್ವ ಕಚ್ಚಿ ಎತ್ಕಟ್ಟಿ, ಹತ್ತಾಳ್ ಮಾಡು ಕೆಲ್ಸ ತನ್ನ ಮಗ್ನ ಕರ್ಕೊಂಡು ಹೊತ್ತೇರುತನಕ ಹೆಂಡಿಕಸ ಬಳ್ದು, ರೋಡ್ ಮಾಡಕಂತ ಹಡ್ಡಿದ ತೆಗ್ಗಿನ್ಯಾಗ ನಿಂತ ಮಳಿನರ್ಲೇ ಕೈ ತೊಳ್ದು. ಗೌಡ್ರ ಮನಿ ಗೇಟ್ ಮುಂದ ನಿಂತು 'ಗೌಡ್ಸಾನಿ... ಯವ್ವ ಗೌಡ್ಸಾನಿ... ಕಸ ಬಳೆದ ಆಗ್ಯೆತಿ ಒಂದ ರೊಟ್ಟಿ ಹಾಕೆವ್ವ' ಅಂತ ಆರೇಳು ಸಾರಿ ಕರ್ದಾಗ ಹರ್ಗ ಬಂದ ಗೌಡ್ಸಾನಿ, ಎರ್ಡ ತಂಗ್ಳ ರೊಟ್ಟಿ ಅದ್ರಾಗ ಸ್ವಲ್ಪ ಗೊಡ್ಡಖಾರ, ತಂದು 'ಏಯ್...!ಸರ್ಗಿಡಿ ಸಾಮವ್ವ' ಅಂತ್ಹೇಳಿ ಮಾರುದ್ದ ದೂರ ನಿಂತು ಉಡ್ಯಾದಾಗ ರೊಟ್ಟಿ ಎಸ್ದಳು. ಗಾಳಿಗಿ ಅರ್ಧ ಖಾರ ಮಗನ ಕಣ್ಣಾಗ ಇನ್ನರ್ಧ ಸಾಮವ್ವನ ಮೈತುಂಬಾ ಆಯ್ತು. 'ಇದ್ನೆಲ್ಲಿ ಇಲ್ಲೇ ಜಾಡ್ಸಗೋತ ನಿಂತ್ರ ಗೌಡ್ಸಾನಿ ಬೈದಾಳೂ' ಅಂತ್ಹೇಳಿ ಮಗ್ನ ಕರ್ಕೊಂಡು ಮನಿಕಡಿ ದಾರಿ ಹಿಡ್ದಳು.

ಸಂಡಾಸ್ಕ ಹೋಗಿ ಎದ್ರಿಗಿ ಬರ್ತಿದ್ದ ತಿಪ್ಪಣ್ಣಗ ಆತ್ನ ಮಗ 'ಯಪ್ಪಾ ನಾವೇ ಯಾಕ್ ಗೌಡ್ರ ಮನಿ ಹೆಂಡಿಕಸ ಬಳೀಬೇಕು, ಅದು ಬರೀ ಎರ್ಡ ರೊಟ್ಟಿ ಸಲ್ಯಾಕ. ನಾವು ಬಿಟ್ರ ಅವರ್ದು ಅವ್ರು ಮಾಡ್ಕೊತಾರ ಬಿಡು' ಅಂತ ಸಿಟ್ಟಲೇ ಮೂಗ ನಿಗ್ರಿಸಿ ಅಂದ. ಆಗ ಮಗನ ಮಾತಿಗಿ ತಂದಿ 'ಏಯ್... ಹಂಗೆಲ್ಲ ಅನ್ಬಾರ್ದು ಲೇ... ಊರ್ ಒಳ್ಗಿರೊ ಬಿಳಿ ಮಂದಿ ಸತ್ತ ಸುದ್ದಿ ಹೇಳೋದು, ಅವ್ರ ಮನಿ ಲಗ್ಣಕ ಕಟಗಿ ಒಡೇದು, ನಮ್ ಮುತ್ತ್ಯಾನ ಕಾಲ್ದಿಂದ ನಡ್ಕೊತ ಬಂದಾದ. ಕುಣಿಮ್ಯಾಲ, ಅವ್ರು ಲಗ್ಣದಾಗ ಚ್ಯಾಕ್ರೀ ಮಾಡಿದ್ರ ಒಂದಿಷ್ಟು ಕಾಳು-ಕಡಿ, ನಾಕಾಣೆ ರೊಕ್ಕ್ ಸಿಗ್ತಾವ, ಆಯ್ತ್ ನಿಂಗ್ ಗೊತ್ತಾಗಲ್ಲ ಜಳ್ಕ ಮಾಡ್ನಡಿ' ಅಂತ ಅವ್ರಪ್ಪ ಮಾತು ಮುಗ್ಸಟ್ಟಿಗೆ ಮನಿ ಒಳ್ಕ ಹೋದ ಪರಸಪ್ಪ ಗೌಡ್ರ ಮಾನ್ಯಾಗ ಕೊಟ್ಟ ಜೋಳದ ರೊಟ್ಟಿ ತಿನ್ನಾಕ ಕುಂತ. ಅಷ್ಟರಲ್ಲಿ ಬರ್ಗಿ ಇಟ್ಟು ಬಂದ ಸಾಮವ್ವ 'ಮಾರಿ ಇಲ್ಲ! ಮುಕ್ಕಿಲ್ಲ! ತಿನ್ನಾಕ ಕುಂತ ನೋಡ್ ಹೆಂಡಿ, ಏಳು ಮೊದ್ಲು ಜಳ್ಕ ಮಾಡಿ ಸಾಲಿಗಿ ತಯಾರಾಗು' ಅಂತ ಜಬ್ರಿಸಿದ್ಲು. 'ನಾ ಸಾಲಿಗಿ ಹೋಗಲಂದ್ರ ಹೋಗಲ್ಲ, ಮುಂಜ್ ಮುಂಜಾಳೆ ಕುರಬ್ರು, ಬ್ಯಾಡ್ರು, ಸ್ವಾಮ್ಯಾರ ಮಂದಿ ನನ್ನ ವಾರಿಗಿ ಹುಡ್ಗರು-ಹುಡ್ಗಾರೆಲ್ಲ, ನಾ ಹೆಂಡಿಕಸ ಬಳೆದು

